# ಶಿಸ್ತು ಪಾಲಕರಿಗೆ ಸಲಾಂ!

**ಗೃಹರಕ್ಷಕ ದಳ, ಸರ್ಕಾರಿ ಪ್ರಾಯೋಜಿತ ಸ್ವಯಂ ಸೇವಾ ಸಂಸ್ಥೆಯಾಗಿದ್ದು ಸಮಾಜದ ಎಲ್ಲಾ ಧರ್ಮದ ಜಾತಿಯ ಮತ್ತು ವರ್ಗದ ಜನರಿಗೆ ಮುಕ್ತವಾಗಿ ತೆರೆದಿರುತ್ತದೆ. ಸಮಾಜಕ್ಕಾಗಿ ಏನಾದರೂ ಮಾಡಬೇಕು ಎನ್ನುವ ತುಡಿತ ಇರುವ ವ್ಯಕ್ತಿಗಳು, ಯಾವುದೇ ಫಲಾಪೇಕ್ಷೆ ಇಲ್ಲದೆ ಸಮುದಾಯದ ಸೇವೆ ಮಾಡುವ ಆಶಯ ಹೊಂದಿದ್ದಲ್ಲಿ ಗೃಹರಕ್ಷಕದಳ ಒಂದು ಒಳ್ಳೆಯ ವೇದಿಕೆ.**

**■ ಡಾ. ಮುರಲೀ ಮೋಹನ್ ಚೂಂತಾರು**

ಗೃಹ ರಕ್ಷಕದಳ ಎನ್ನುವುದು ಸರ್ಕಾರದ ಅಧೀನದಲ್ಲಿರುವ ಸ್ವತಂತ್ರವಾದ, ಶಿಸ್ತುಬದ್ಧವಾದ ಸಮವಸ್ತ್ರದಾರಿ ಸ್ವಯಂ ಸೇವಕರನ್ನು ಒಳಗೊಂಡ ಸ್ವಯಂ ಸೇವಾ ಸಂಸ್ಥೆ. ಸಮಾಜಕ್ಕೆ ತುರ್ತು ಅಗತ್ಯದ ಸಂದರ್ಭಗಳಲ್ಲಿ ಸೇವೆ ಸಲ್ಲಿಸುವ ಸಂಸ್ಥೆ ಇದು.

'ನಿಷ್ಕಾಮ ಸೇವೆ' ಎಂಬ ಮೂಲಮಂತ್ರದೊಂದಿಗೆ ಸಮಾಜದ ಎಲ್ಲಾ ವರ್ಗದ ಜನರಿಗೆ ರಕ್ಷಣೆ ನೀಡುವ ಧ್ಯೇಯವನ್ನು ಇದು ಹೊಂದಿದೆ. ಎರಡನೇ ಮಹಾಯುದ್ಧದ ಸಮಯದಲ್ಲಿ ಹಿಟ್ಲರನ 'ನಾಜಿ' ಸೈನ್ಯಪಡೆಯನ್ನು ಹಿಮ್ಮೆಟ್ಟಿಸಲು ಪೋಲಿಸ್ ಮತ್ತು ಮಿಲಿಟರಿ ಪಡೆಗೆ ಪರ್ಯಾಯವಾಗಿ ದೇಶದ ಜನರೇ ಪ್ರಾಣ ತ್ಯಾಗ ಮಾಡಿ ದೇಶವನ್ನು ರಕ್ಷಿಸಲು ಉದ್ಭವಿಸಿದ ನಾಗರಿಕ ಪಡೆ ಮೊದಲು ಸ್ಥಳೀಯ ರಕ್ಷಣಾ ಕಾರ್ಯಕರ್ತ (Local defence volunteer) ಎಂದು ಕರೆಯಲಾಗುತ್ತಿತ್ತು. 1946ರಲ್ಲಿ ಭಾರತದ ಬಾಂಬೆ ರಾಜ್ಯದಲ್ಲಿ ಗೃಹ ರಕ್ಷಕ ದಳದ ಮೂಲ ಅಸ್ಥಿತ್ವಕ್ಕೆ ಬಂದಿತು. ನೌಕಾದಳ, ವಾಯುದಳ, ಭೂ ಸೇವಾದಳದ ಜೊತೆಗೆ ಜನರಿಗೆ ಮತ್ತು ದೇಶಕ್ಕೆ ತುರ್ತು ಸಂದರ್ಭಗಳಲ್ಲಿ ರಕ್ಷಣೆ ನೀಡುವ ಉದ್ದೇಶದಿಂದ ಪೌರ ರಕ್ಷಣೆ ಮತ್ತು ಗೃಹರಕ್ಷಕದಳ ಎಂಬುದಾಗಿ ಡಿಸೆಂಬರ್ 6ರಂದು ಅಸ್ತಿತ್ವಕ್ಕೆ ಬಂದಿತು.

**ಡಿಸೆಂಬರ್ 6**
**ರಾಷ್ಟ್ರೀಯ**
**ಗೃಹರಕ್ಷಕ ದಿನ**

ದಿ. ಮೊರಾರ್ಜಿ ದೇಸಾಯಿಯವರು ಪ್ರಧಾನಿಯಾಗಿದ್ದ ಕಾಲದಲ್ಲಿ ಗೃಹರಕ್ಷಕದಳದ ಕಾಯಿದೆ ಮತ್ತು ಕಾನೂನುಗಳನ್ನು ಗೃಹ ಸಚಿವಾಲಯದ ಅಡಿಯಲ್ಲಿ ತರಲಾಯಿತು. ಸಾಮಾನ್ಯ ಜನರಿಗೆ ಮತೀಯ ಗಲಭೆ ಹಿಂಸಾವಾದಗಳ ಸಂದರ್ಭದಲ್ಲಿ ರಕ್ಷಣೆ ಒದಗಿಸಲು ಈ ರೀತಿಯ ಸ್ವಯಂ ಸೇವಕರ ಪಡೆ ನಿಯೋಜಿಸಲಾಗಿತ್ತು. ಸಾಮಾನ್ಯ ದಿರಿಸಿನಲ್ಲಿ ಪೊಲೀಸರಿಗೆ ಸಹಾಯ ನೀಡುವ ಸದುದ್ದೇಶದಿಂದ ಈ ಅಂಗಸಂಸ್ಥೆಯನ್ನು ಹುಟ್ಟುಹಾಕಲಾಯಿತು. ಮುಂಬಯಿಯಿಂದ ಆರಂಭವಾದ ಈ ಸ್ವಯಂ ಸೇವಕರ ಪಡೆಯನ್ನು ಬೇರೆ ರಾಜ್ಯಗಳಲ್ಲೂ ಆರಂಭಿಸಲಾಯಿತು. ಕ್ರಮೇಣ 1962ರಲ್ಲಿ ಭಾರತ– ಚೀನಾ ಯುದ್ಧದ ಸಂದರ್ಭದಲ್ಲಿ ಈ ಸ್ವಯಂಸೇವಕರ ಸೇವೆಯನ್ನು ರಕ್ಷಣಾ ಕಾರ್ಯಕ್ಕೆ ಬಳಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಎಲ್ಲಾ ರಾಜ್ಯ ಸರ್ಕಾರ ಮತ್ತು ಕೇಂದ್ರಾಡಳಿತ ರಾಜ್ಯಗಳ ಸ್ವಯಂಸೇವಕರ ತಂಡಗಳನ್ನು 'ಗೃಹರಕ್ಷಕ ದಳ' ಎಂಬುದಾಗಿ ಸಮವಸ್ತ್ರ ನೀಡಿ ಮನ್ನಣೆಯನ್ನು ನೀಡಿತು.

## ಗೃಹರಕ್ಷಕ ದಳದ ಧ್ಯೇಯ

ಗೃಹರಕ್ಷಕದಳ ಎನ್ನುವುದು ದೇಶದ ಕಾನೂನು ಮತ್ತು ಶಿಸ್ತು ಪಾಲನೆಯಲ್ಲಿ ಪೋಲಿಸ್ ಇಲಾಖೆಗೆ ಪೂರಕ ಪಡೆಯಾಗಿ ಕೆಲಸ ಮಾಡುತ್ತದೆ. ಪ್ರಾಕೃತಿಕ ಮತ್ತು ಮಾನವ ನಿರ್ಮಿತ ಎಲ್ಲಾ ಬಗೆಯ ವಿಪತ್ತುಗಳ ವಿಷಮ ಪರಿಸ್ಥಿತಿಗಳಲ್ಲಿ ಜೀವ ಮತ್ತು ಆಸ್ತಿ ಸಂರಕ್ಷಣೆ ವಿಪತ್ತು ನಿರ್ವಹಣೆ, ಪರಿಹಾರ ಮತ್ತು ಪುನರ್ವಸತಿ ಕಾರ್ಯಗಳಲ್ಲಿ ಸಮುದಾಯಕ್ಕೆ ಅಗತ್ಯ ನೆರವು ನೀಡುತ್ತದೆ. ಅದೇ ರೀತಿ ಬೆಂಕಿ ಅವಗಢ, ವೈಮಾನಿಕ ದಾಳಿ, ಸುನಾಮಿ, ಪ್ರಳಯ, ಭೂಕಂಪ ಅಥವಾ ಇನ್ನಾವುದೇ ಸಾಂಕ್ರಾಮಿಕ ರೋಗಗಳು ಉಲ್ಬಣವಾದಾಗ, ಸಾಮಾಜಿಕ ಶಾಂತಿ, ಸುವ್ಯವಸ್ಥೆ ಮತ್ತು ನೆಮ್ಮದಿಯನ್ನು ಪುನರ್ ಸ್ಥಾಪಿಸಲು ಪೊಲೀಸ್ ಪಡೆಗೆ ಮತ್ತು ಸರಕಾರಕ್ಕೆ ಪೂರಕವಾಗಿ ಕೆಲಸ ನಿರ್ವಹಿಸಿರುತ್ತದೆ.

ದೇಶದ್ಯಾದ್ಯಂತ ಸುಮಾರು 6 ಲಕ್ಷ ಗೃಹರಕ್ಷಕ ಸಿಬ್ಬಂದಿಗಳಿದ್ದು ದೇಶದ ಎಲ್ಲಾ ರಾಜ್ಯಗಳಲ್ಲಿ (ಕೇರಳ ಮತ್ತು ಅರುಣಾಚಲ ಪ್ರದೇಶ ಹೊರತುಪಡಿಸಿ) ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೆಲಸ ನಿರ್ವಹಿಸುತ್ತವೆ. ಗೃಹರಕ್ಷಕರಲ್ಲಿ ನಗರ ಮತ್ತು ಗ್ರಾಮೀಣ ಗೃಹರಕ್ಷಕ ಪಡೆ ಎಂಬುದಾಗಿ ಎರಡು ಬಗೆಗಳಿವೆ. ಅದಲ್ಲದೆ ಗಡಿ ರಕ್ಷಣ ಗೃಹರಕ್ಷಕ ಪಡೆ ಎಂಬುದಾಗಿ ಕರೆದು ಗಡಿ ರಕ್ಷಣ ಪಡೆಗೆ ಪೂರಕವಾಗಿ ಕೆಲಸ ಮಾಡುವ ಪಡೆಯನ್ನು ಹೊಂದಿದೆ. ಈ ಗಡಿರಕ್ಷಣಾ ಗೃಹರಕ್ಷಕ ಪಡೆ ಗಡಿ ಪ್ರದೇಶಗಳು ಹೆಚ್ಚಿರುವ ಪಂಜಾಬ್, ರಾಜಸ್ಥಾನ, ಗುಜರಾತ್, ಅಸ್ಸಾಮ್, ಪಶ್ಚಿಮ ಬಂಗಾಳ, ಮೇಘಾಲಯ ಮತ್ತು ತ್ರಿಪುರಗಳಲ್ಲಿ ಹೆಚ್ಚು ಕ್ರಿಯಾತ್ಮಕವಾಗಿದೆ. ಈ ಪಡೆಯು ಹೆಚ್ಚು ತರಬೇತಿ ಪಡೆದ ಮತ್ತು ಶಸ್ತ್ರ ಪ್ರಯೋಗದಲ್ಲಿ ಹೆಚ್ಚಿನ ಪರಿಣಿತಿ ಪಡೆದ ಗೃಹರಕ್ಷಕರನ್ನು ಹೊಂದಿದ್ದು ಗಡಿ ರಕ್ಷಣೆಯಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ ಕೆಲಸ ಮಾಡುತ್ತದೆ.

## ಯಾರು ಗೃಹರಕ್ಷಕ ದಳ ಸೇರಬಹುದು?

ಗೃಹರಕ್ಷಕ ದಳಕ್ಕೆ ಸೇರಲು ಮುಖ್ಯವಾಗಿ ಸಮಾಜದ ಸೇವೆ ಮಾಡಬೇಕು ಎನ್ನುವ ತುಡಿತ ಇರಬೇಕು. ಸ್ವಯಂ ಸೇವಾ ಮನೋಭಾವವುಳ್ಳ ಸಮಾಜದ ಎಲ್ಲಾ ಸ್ತರದ ವ್ಯಕ್ತಿಗಳು ಈ ಸಂಸ್ಥೆಯನ್ನು ಸೇರಬಹುದು. ದೈಹಿಕವಾಗಿ ಆರೋಗ್ಯವಾಗಿದ್ದು ಸಮಾಜದ ಉನ್ನತಿಗೆ ಯಾವುದೇ

